ಡಾ॥ ಎಂ.ಎಚ್. ಅಂಬರೀಷ್ :– (ಮಾನ್ಯ ವಸತಿ ಸಚಿವರು) :–

ಅ), ಆ) ಮತ್ತು ಇ) ಬಸವ ವಸತಿ ಯೋಜನೆಯಡಿ ಹೆಚ್ಚುವರಿ ಗುರಿಯನ್ನು ಮಾನ್ಯ ಶಾಸಕರುಗಳ ಬೇಡಿಕೆಯ ಮೇರೆಗೆ ಅತಿ ಅವಶ್ಯವಿರುವ ಶಾಸಕರ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಯಾವುದೇ ಪಕ್ಷವಾರು ತಾರತಮ್ಯ ಮಾಡಿರುವುದಿಲ್ಲ.

ಈ) ಕುಡಚಿ ಮತ ಕ್ಷೇತ್ರದಲ್ಲಿ 2010ರಲ್ಲಿ ನಡೆಸಲಾದ ಗುಡಿಸಲು ವಾಸಿಗಳ ಸಮೀಕ್ಷೆ ಪ್ರಕಾರ 9428 ಫಲಾನುಭವಿಗಳು ಇರುವುದು ಕಂಡುಬಂದಿರುತ್ತದೆ.

ಕುಡಚಿ ಮತ ಕ್ಷೇತ್ರಕ್ಕೆ 2010 ರಿಂದ 2014 ರವರೆಗೆ 8662 ಮನೆಗಳನ್ನು ಮಂಜೂರು ಮಾಡಲಾಗಿದೆ.

ಉ) 2013–14ನೇ ಸಾಲಿಗೆ ಕುಡಚಿ ವಿಧಾನಸಭಾ ಕ್ಷೇತ್ರಕ್ಕೆ 300 ಹೆಚ್ಚುವರಿ ಮನೆಗಳ ಗುರಿಯನ್ನು ನೀಡಲಾಗಿದೆ.

ಊ) ಉದ್ಭವಿಸುವುದಿಲ್ಲ.

ಉನ್ನತೀಕರಿಸಿದ ಪ್ರೌಢ ಶಾಲೆಗೆ ವರ್ಗಾವಣೆ

160(363) ಶ್ರೀ ರಾಜೀವ್ ಪಿ. (ಕುಡಚಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಪ್ರೌಢ ಶಾಲೆಗಳಿಗೆ ವರ್ಗಾವಣೆ ಮಾಡದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ ಹಾಗೂ ಉಚ್ಚ ನ್ಯಾಯಾಲಯದ ಆದೇಶ ಪಡೆದ ಶಿಕ್ಷಕರು ಮಾತ್ರ ವರ್ಗಾವಣೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ನ್ಯಾಯಾಲಯದ ಮೊರೆ ಹೋದ ಶಿಕ್ಷಕರನ್ನು ಮಾತ್ರ ವರ್ಗಾವಣೆಗೆ ಪರಿಗಣಿಸಿ, ಇನ್ನುಳಿದ ಶಿಕ್ಷಕರನ್ನು ಪರಿಗಣಿಸದೇ ಇರುವುದರ ಬಗ್ಗೆ ಸರ್ಕಾರದ ನಿಲುವು ಏನು;

ಈ) ಎಲ್ಲಾ ಶಿಕ್ಷಕರನ್ನು ಸಾಮಾನ್ಯ ವರ್ಗಾವಣೆ ನಿಯಮಕ್ಕೆ ಒಳಪಡಿಸಲು ಸರ್ಕಾರ ತೀರ್ಮಾನ ಕೈಗೊಳ್ಳದೇ ಇರುವ ಕಾರಣ ಏನು ; ಈ ರೀತಿಯ ಅಸಮಾನತೆ ಸರಿಪಡಿಸಲು ಸರ್ಕಾರ ಶೀಘ್ರ ಕ್ರಮಕೈಗೊಳ್ಳುವುದೇ ?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :–

ಅ) ಹೌದು.

ಆ) ಹೌದು.

ಇ) ನ್ಯಾಯಾಲಯದ ಪ್ರಕರಣವಲ್ಲದೇ ಟಿ.ಜಿ.ಟಿ. ಶಿಕ್ಷಕರನ್ನು ಟಿ.ಜಿ.ಟಿ. ಯಿಂದ ಟಿ.ಜಿ.ಟಿ. ಹುದ್ದೆಗೆ ಕೌನ್ಸೆಲ್ಲಿಂಗ್ ಮೂಲಕ ಕೋರಿಕೆಯ ವರ್ಗಾವಣೆಗೆ ಪರಿಗಣಿಸಲಾಗುತ್ತಿದೆ.

ಈ) ಟಿ.ಜಿ.ಟಿ. ಶಿಕ್ಷಕರು ಮೂಲತಃ ಎಸ್.ಎಸ್.ಎ. ವತಿಯಿಂದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮಂಜೂರಾದ ಹುದ್ದೆಗಳಾಗಿದ್ದು, ಇವರ ವೇತವನ್ನು ಎಸ್.ಎಸ್.ಎ. ಅಡಿಯಲ್ಲಿ ಕೇಂದ್ರ/ ರಾಜ್ಯ ಸರ್ಕಾರದ 65:35 ರಂತೆ ಯೋಜನಾ ವೆಚ್ಚದಿಂದ ಭರಿಸಲಾಗುತ್ತಿದೆ. ಟಿ.ಜಿ.ಟಿ. ಶಿಕ್ಷಕರಿಗೆ ಪ್ರೌಢ ಶಾಲೆಗೆ ವರ್ಗಾವಣೆ ಹೊಂದಲು ಅವಕಾಶ ನೀಡಿದ್ದಲ್ಲಿ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳ ವ್ಯಾಸಂಗಕ್ಕೆ ತೊಂದರೆಯಾಗುವ ದೃಷ್ಟಿಯಿಂದ ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನದ ಸದ್ಬಳಕೆ ಆಗುವುದಿಲ್ಲವೆಂದು ವರ್ಗಾವಣೆಗೆ ಅವಕಾಶ ಕಲ್ಪಿಸಲಾಗುತ್ತಿಲ್ಲ.

ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಗುಣಮಟ್ಟ

161(364) ಶ್ರೀ ರಾಜೀವ್ ಪಿ. (ಕುಡಚಿ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಖಾಸಗಿ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಶಾಲೆಗಳ ಮತ್ತು ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಒಂದೇ ರೀತಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಆರ್ಥಿಕವಾಗಿ ಕಡಿಮೆ ಆದಾಯ ಹೊಂದಿರುವ ಸಾಮಾನ್ಯ ಜನರ ಮಕ್ಕಳು ಮಾತ್ರ ಸರ್ಕಾರದ ಶಾಲೆಗಳಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ ; ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಎಲ್ಲಾ ಅಧಿಕಾರಿಗಳು, ನೌಕರರು, ರಾಜಕಾರಣಿಗಳು ಹಾಗೂ ಎಲ್ಲಾ ಸಾರ್ವಜನಿಕರು ತಮ್ಮ ಮಕ್ಕಳನ್ನು 1 ರಿಂದ 7ನೇ ತರಗತಿಯವರೆಗೆ ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿಸಬೇಕು ಎಂಬ ಕಾನೂನು ತರಲು ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ತೆಗೆದುಕೊಂಡ ಕ್ರಮಗಳೇನು ?